# 3 ಜನಪದ ಕುಸುಮ

ಘಟಕ 3 : ಜನಪದ ಕುಸುಮ

ಸಮಯ : 10 ಗಂಟೆಗಳು

## ಕಲಿಕಾ ಸಾಮಗ್ರಿಗಳು

- ಪಠ್ಯಪುಸ್ತಕ
- ಅಡಕ ಮುದ್ರಿಕೆ (ಡಿ.ವಿ.ಡಿ.)
- ಅಂತರ್ಜಾಲ
- ಪರಾಮರ್ಶನ ಗ್ರಂಥಗಳು

## ಮೌಲ್ಯಗಳು ಹಾಗೂ ಮನೋಭಾವಗಳು

- ಜನಪದ ಗೀತೆಯನ್ನು ಆಲಿಸುವ ಮತ್ತು ಹಾಡುವ ಮನೋಭಾವ.
- ಸಾಮಾಜಿಕ ಜೀವನ ಮೌಲ್ಯಗಳನ್ನು ತಿಳಿದುಕೊಳ್ಳುವ ಮನೋಭಾವ.
- ಜನಪದ ಜೀವನ, ಸಂಸ್ಕೃತಿ, ನಂಬಿಕೆಗಳನ್ನು ತಿಳಿದುಕೊಳ್ಳುವ ಮನೋಭಾವ.
- ಜನಪದ ಭಾಷೆ, ಸಾಹಿತ್ಯ, ಕಲೆ ಇತ್ಯಾದಿಗಳನ್ನು ಕಾಪಾಡಬೇಕೆಂಬ ಮನೋಭಾವ.
- ಜನಪದ ಸಂಸ್ಕೃತಿಯ ಉತ್ತಮ ಅಂಶಗಳನ್ನು ತಮ್ಮ ಜೀವನದಲ್ಲೂ ಅಳವಡಿಸುವ ಮನೋಭಾವ.

# ಮುನ್ನುಡಿ

ಪ್ರತಿಯೊಂದು ಕಾಲಘಟ್ಟದ ಜನಾಂಗಕ್ಕೂ ಅವರದ್ದೇ ಆದ ಕಲೆ, ಸಂಸ್ಕೃತಿ, ಜೀವನ ಶೈಲಿ ಇರುತ್ತವೆ. ಹಿಂದಿನ ಕಾಲದ ಹಳ್ಳಿಯ ಜನರು ಸಾಮಾನ್ಯವಾಗಿ ಅವಿದ್ಯಾವಂತರಾಗಿದ್ದರು. ಆದರೆ ಅವರಲ್ಲಿ ಅಪಾರವಾದ ಜೀವನಾನುಭವ ತುಂಬಿಕೊಂಡಿತ್ತು. ಅದನ್ನು ಅವರು ಹಲವು ರೀತಿಯಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ. ಅದುವೇ ಜನಪದ ಸಾಹಿತ್ಯವಾಗಿ ಉಳಿದುಕೊಂಡು ಬಂದಿದೆ. ಕನ್ನಡದಲ್ಲಿ ಅಪಾರವಾದ ಜನಪದ ಸಾಹಿತ್ಯವಿದೆ. ಕತೆ, ಗಾದೆ, ಒಗಟು ಹೀಗೆ ವಿವಿಧ ಪ್ರಕಾರಗಳನ್ನು ನಾವು ಜನಪದ ಸಾಹಿತ್ಯದಲ್ಲಿ ಕಾಣುತ್ತೇವೆ.

ಜನಪದ ಗೀತೆಗಳು ವೈವಿಧ್ಯಮಯ ಛಂದಸ್ಸಿನಲ್ಲಿ ಮೂಡಿಬಂದಿವೆ. ಸರಳವೂ, ಸುಂದರವೂ ಆದ ನಡಿಗೆ ಈ ಹಾಡುಗಳಿಗೆ ಮೆರುಗನ್ನು ನೀಡಿದೆ.

ಜನಪದ ಸಾಹಿತ್ಯದಿಂದ ಅಂದಿನ ಜೀವನ, ಸಂಸ್ಕೃತಿಯ ಪರಿಚಯವು ನಮಗಾಗುತ್ತದೆ. ಆ ಸಾಹಿತ್ಯದಿಂದ ನಮ್ಮ ಜೀವನಕ್ಕೂ ಮಾರ್ಗದರ್ಶನ ದೊರಕುತ್ತದೆ. ಜನಪದರು ಎಲೆ ಮರೆಯ ಹೂವಾಗಿ ಸಾಹಿತ್ಯಕ್ಕೆ ದೊಡ್ಡ ಕೊಡುಗೆ ನೀಡಿದವರಾಗಿದ್ದಾರೆ.

# UNIT FRAME

**ಘಟಕ 3 : ಜನಪದ ಕುಸುಮ** ಸಮಯ : 10 ಗಂಟೆಗಳು

## ಕಲಿಕಾ ಸಾಧನೆಗಳು

- ಜನಪದ ಸಾಹಿತ್ಯದ ಹುಟ್ಟು, ಬೆಳವಣಿಗೆ, ವಿಶೇಷತೆಗಳನ್ನು ತಿಳಿಯುತ್ತಾರೆ.
- ಜನಪದಗೀತೆ, ಜನಪದ ನಂಬಿಕೆ ಮೊದಲಾದುವುಗಳಲ್ಲಿನ ಆಶಯಗಳು, ಆಚಾರ, ಅನುಷ್ಠಾನ, ಸಾಮಾಜಿಕ ದೃಷ್ಟಿ ಮೊದಲಾದವುಗಳನ್ನು ತಿಳಿಯುತ್ತಾರೆ.
- ವಿವಿಧ ರೀತಿಯ ಸಾಹಿತ್ಯ ರಚನೆಗಳನ್ನು ವಿಶ್ಲೇಷಿಸಿ ಸ್ವಂತ ದೃಷ್ಟಿಕೋನದಿಂದ ವಿಮರ್ಶಿಸುತ್ತಾರೆ.
- ಭಾಷಾ ಪ್ರಭೇದ, ಮೌಖಿಕ ಸಾಹಿತ್ಯಗಳ ಪರಿಚಯ ಮಾಡಿ ಆಶಯಗಳನ್ನು ರೂಪಿಸುತ್ತಾರೆ.

| ಪರಿಕಲ್ಪನೆ | ಪ್ರಕ್ರಿಯೆ/ ಚಟುವಟಿಕೆಗಳು/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| ಜನಪದ ಸಾಹಿತ್ಯದ ಉಗಮ–ವಿಕಾಸ ಸಾಹಿತ್ಯ ಕ್ಷೇತ್ರದಲ್ಲಿ ಜನಪದ ಸಾಹಿತ್ಯಕ್ಕಿರುವ ಸ್ಥಾನ | • ಪೂರ್ವಜ್ಞಾನದ ಅವಲೋಕನಕ್ಕಾಗಿ ವಿದ್ಯಾರ್ಥಿಗಳೊಡನೆ ಜನಪದ ಸಾಹಿತ್ಯದ ಪ್ರಕಾರಗಳ ಬಗ್ಗೆ ಪ್ರಶ್ನಿಸುವುದು.<br>• ಅಧ್ಯಾಪಕರು ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ತಿಳಿಯುವುದು.<br>• ಜನಪದ ಸಾಹಿತ್ಯದ ಉಗಮದ ಬಗೆಗೆ ತಿಳಿಸುವುದು.<br>• ಜನಪದ ಸಾಹಿತ್ಯದ ಉಗಮ–ವಿಕಾಸಗಳನ್ನು ತಿಳಿಯುತ್ತಾರೆ.<br>• ಉತ್ರಾಜಿ ಕಥನ ಕವನವನ್ನು ಹಾಡಿಸುವುದು.<br>• ಜನಪದ ತ್ರಿಪದಿಗಳನ್ನು, ಮುಕ್ತಕಗಳನ್ನು ಭಾವಪೂರ್ಣವಾಗಿ ಹಾಡುವುದು.<br>• ಜನಪದ ತ್ರಿಪದಿಗಳ ಹಾಡಿನ ವಿಧಾನವನ್ನು ಅಧ್ಯಾಪಕರು ತಿಳಿಸುವುದು.<br>• ಧ್ವನಿ ಸುರುಳಿಯನ್ನು ಕೇಳಿಸುವುದು, ವಿದ್ಯಾರ್ಥಿಗಳು ಆಲಿಸುವುದು. | ಜಾನಪದದ ಪ್ರಕಾರಗಳ ಬಗ್ಗೆ ಅರಿವು<br><br>ಜನಪದ ಕಲೆ, ಕ್ರೀಡೆಗಳ ಪಟ್ಟಿ ತಯಾರಿಸುವುದು. |

| ಪರಿಕಲ್ಪನೆ | ಪ್ರಕ್ರಿಯೆ/ ಚಟುವಟಿಕೆಗಳು/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| | • ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡಿ ಪ್ರತಿ ಗುಂಪಿಗೂ ಒಂದೊಂದು ಚಟುವಟಿಕೆಗಳನ್ನು ನೀಡುವುದು. ಕಥನಗೀತೆ, ತ್ರಿಪದಿಗಳು (ಇತ್ಯಾದಿಗಳನ್ನು ಗುಂಪಿಗೆ ನೀಡುವುದು.)<br>• ಆಶಯವನ್ನು ಬರೆಯಲು ಹೇಳುವುದು.<br>• ಆಸ್ವಾದನಾ ಟಿಪ್ಪಣಿಯನ್ನು ಬರೆಸುವುದು. ತರಗತಿಯಲ್ಲಿ ಮಂಡಿಸುವುದು. | ಆಸ್ವಾದನಾ ಟಿಪ್ಪಣಿಯನ್ನು ಬರೆಯುವರು. |
| ಜನಪದ ಕಥನ ಗೀತೆ, ತ್ರಿಪದಿಗಳ ಪರಿಚಯ ಮಾಡುವುದು. | • 'ಉತ್ರಾಜಿ' ಕಥನ ಗೀತೆಯಲ್ಲಿ ಮೂಡಿ ಬಂದಿರುವ ಕೌಟುಂಬಿಕ ವ್ಯವಸ್ಥೆಯ ಏರಿಳಿತಗಳನ್ನು ಇಂದಿನ ಸಮಾಜಕ್ಕೆ ಹೋಲಿಸುವುದು ಮತ್ತು ಸಾಮಾಜಿಕ ಬದಲಾವಣೆಯನ್ನು ಗುರುತಿಸುವುದು.<br>• ತುಲನಾತ್ಮಕ ಲೇಖನದ ಮೌಲ್ಯಮಾಪನ<br>• ತ್ರಿಪದಿಗಳಲ್ಲಿ ಕಂಡು ಬರುವ ಸಾಮಾಜಿಕ ಮೌಲ್ಯಗಳನ್ನು ತಿಳಿದುಕೊಳ್ಳುವುದು.<br>• ಜನಪದ ಸಾಹಿತ್ಯದಲ್ಲಿ ಮೂಡಿ ಬಂದ ಗ್ರಾಮೀಣ ಭಾಷೆಯ ಸೊಗಡನ್ನು ತಿಳಿಯುವುದು.<br>• ವಿಚಾರಗೋಷ್ಠಿ, ಸಂದರ್ಶನ ಲೇಖನ, ಕಾರ್ಯಯೋಜನೆ ಮುಂತಾದ ಚಟುವಟಿಕೆಗಳನ್ನು ಮಾಡುವುದು.<br>• ಸಂದರ್ಶನದ ಪ್ರಶ್ನಾವಳಿಯನ್ನು ತಯಾರಿಸುವುದು, ಕಾರ್ಯಯೋಜನೆ, ಪ್ರಬಂಧಗಳನ್ನು ಅಧ್ಯಾಪಕರು ಅವಲೋಕಿಸುವುದು. | ಜಾನಪದ ವಸ್ತು ವಿಷಯ ಭಾಷೆಗಳ ಬಗ್ಗೆ ತಿಳಿಯುತ್ತಾರೆ.<br>ತುಲನಾತ್ಮಕ ಲೇಖನ ತಯಾರಿ ಪ್ರಬಂಧ, ಕಾರ್ಯಯೋಜನೆ ತಯಾರಿ.<br>ಸಂದರ್ಶನಕ್ಕಾಗಿ ಪ್ರಶ್ನಾವಳಿಯನ್ನು ಬರೆಯುತ್ತಾರೆ. |

| ಪರಿಕಲ್ಪನೆ | ಪ್ರಕ್ರಿಯೆ/ ಚಟುವಟಿಕೆಗಳು/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| ಮಾಹಿತಿ ತಂತ್ರಜ್ಞಾನದ ಬಳಕೆ | • ಕ್ಷೇತ್ರಕಾರ್ಯದ ಮೂಲಕ ಹಿಂದಿನ ತಲೆಮಾರಿನ ಜನರಲ್ಲಿ ಪ್ರಚಲಿತವಿದ್ದ ಜನಪದ ಸಂಪ್ರದಾಯಗಳ, ನಂಬಿಕೆಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸುವುದು. ಲೇಖನ ತಯಾರಿಸುವುದು.<br>ವಿದ್ಯಾರ್ಥಿಗಳು ಬರೆದ ಲೇಖನವನ್ನು ಗಮನಿಸುವುದು.<br>• ಮಾಹಿತಿ ತಂತ್ರಜ್ಞಾನ ಹಾಗೂ ಅಂತರ್ಜಾಲದ ಮೂಲಕ ಜನಪದ ಹಾಡು, ಕುಣಿತಗಳು, ಆರಾಧನೆಗಳ ಬಗೆಗೆ ಹಾಗೂ ಸಾಮಾಜಿಕ ಹಿನ್ನೆಲೆಗಳ ಬಗೆಗೆ ತಿಳಿಸಿಕೊಡುವುದು.<br>**ನೈಪುಣ್ಯಗಳು :**<br>• ಜನಪದ ಹಾಡುಗಳನ್ನು ಹಾಡುವ ಹಾಗು ಅವುಗಳಲ್ಲಿ ಅಡಕವಾಗಿರುವ ಜೀವನ ಮೌಲ್ಯಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯ.<br>• ಜನಪದ ಹಾಡುಗಳ ಕಲಿಕೆಯಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆಯ ಸಾಮರ್ಥ್ಯ<br>• ಜನಪದ ಗೀತೆಗಳಲ್ಲಿ ಬಳಕೆಯಾಗುವ ಭಾಷೆಯ ವೈಶಿಷ್ಟ್ಯವನ್ನು ತಿಳಿದುಕೊಳ್ಳುವ ಸಾಮರ್ಥ್ಯ.<br>• ಜನಪದರ ಜೀವನ ರೀತಿ, ಸಂಸ್ಕೃತಿ, ಜೀವನ ಮೌಲ್ಯಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯ,<br>• ಕ್ಷೇತ್ರಕಾರ್ಯವನ್ನು ನಡೆಸಿ ಲೇಖನವನ್ನು ಸಿದ್ಧಪಡಿಸುವ ನೈಪುಣ್ಯ | ಕಿರುಲೇಖನ ತಯಾರಿ<br><br>ಮಾಹಿತಿ ತಂತ್ರಜ್ಞಾನವನ್ನು ಬಳಸಿ ಹೆಚ್ಚಿನ ಮಾಹಿತಿ ಸಂಗ್ರಹ |

# ಉತ್ರಾಜಿ

## ಪ್ರವೇಶ

ಜನಪದ ಸಾಹಿತ್ಯದ ಕುರಿತಾಗಿ ವಿದ್ಯಾರ್ಥಿಗಳು ಏನೆಲ್ಲಾ ತಿಳಿದುಕೊಂಡಿದ್ದಾರೆ ಎಂಬುದನ್ನು ಅರಿಯಲು ಅದನ್ನು ಅವರಿಂದ ಹೇಳಿಸುವುದು. ಅವರು ಇಂದಿಗೂ ಹಳ್ಳಿಗಳಲ್ಲಿ ಕಂಡುಬರುತ್ತಿರುವ ಜನಪದ ಜೀವನ ಶೈಲಿಯ ಅಂಶಗಳನ್ನು ಕಡೆಗೆ ಅವರ ಗಮನ ಸೆಳೆಯುವುದು. ಅದರ ಮಹತ್ವವನ್ನು ಅವರು ಅರ್ಥ ಮಾಡಿಕೊಳ್ಳುವುದು. ಬಳಿಕ ಪತ್ಯ ಭಾಗಕ್ಕೆ ಪ್ರವೇಶಿಸುವುದು.

ಕಥನಗೀತೆಯನ್ನು ವಿದ್ಯಾರ್ಥಿಗಳಿಂದ ಹಾಡಿಸುವುದು. ಅಗತ್ಯವಿದ್ದರೆ ಅದನ್ನು ಹಾಡುವ ಧಾಟಿಯನ್ನು ಅಧ್ಯಾಪಕರು ಹೇಳಿಕೊಡುವುದು. ಹಾಡಿದ ಬಳಿಕ ಕಥನಗೀತೆಯಲ್ಲಿ ಬಂದಿರುವ ಮುಖ್ಯ ವಿಷಯವನ್ನು ವಿದ್ಯಾರ್ಥಿಗಳು ಹೇಳಲಿ. ಕಥನಗೀತೆಗಳಲ್ಲಿ ಸಾಮಾಜಿಕ ವಸ್ತು ವಿಷಯಗಳಿರಬಹುದು. ಕೌಟುಂಬಿಕವಾದ ಪ್ರೇಮ, ಬಾಂಧವ್ಯಗಳ ಕವಿತೆ ಇರಬಹುದು. ಇಂದಿನ ಸಮಾಜದಲ್ಲೂ ಕಂಡು ಬರುವ ಕುಟುಂಬ ಕಲಹಗಳ ಕುರಿತು ವಿದ್ಯಾರ್ಥಿಗಳು ತಿಳಿದಿರುತ್ತಾರೆ. ಅದನ್ನು ನೆನಪಿಸುವುದು. ಅಡಕ ಮುದ್ರಿಕೆಯನ್ನು ಬಳಸಿ ಕಥನ ಗೀತೆಯನ್ನು ಕೇಳಿಸುವುದು.

ಪದಗಳ ಅರ್ಥವನ್ನು ವಿದ್ಯಾರ್ಥಿಗಳಿಂದ ಹೇಳಿಸುವುದು. ಅಗತ್ಯವಿದ್ದರೆ ಅಧ್ಯಾಪಕರು ತಿಳಿಸುವುದು.

## ಪದಗಳ ಅರ್ಥ

| | | |
|---|---|---|
| ಮ್ಯಾಗೆ | – | ಮೇಲೆ |
| ಇಕ್ಕು | – | ಇಡು, ನೀಡು |
| ಹುಯ್ಯು | – | ಹೊಯ್ಯು, ಎರೆಯು |
| ಮೆಲುವೋರು | – | ತಿನ್ನುವರು |
| ಅತ್ಯಮ್ಮ | – | ಅತ್ತೆಯವರು |
| ಕೋಡಿ | – | ಪ್ರವಾಹ |
| ಪಾಡು | – | ಹಾಡು, ಅವಸ್ಥೆ |
| ದೀಪವ ತುಂಬೈತೆ | – | ದೀಪವನ್ನು ಆರಿಸಿದೆ (ಸೌಮ್ಯೋಕ್ತಿ) |

ಅರ್ಥಸ್ಪಷ್ಟತೆ ಅಗತ್ಯವಿರುವ ಪದಗಳನ್ನು ವಿಂಗಡಿಸಿ ಹೇಳಲು ಸೂಚಿಸುವುದು. ಅಧ್ಯಾಪಕರು ಸಹಾಯ ಮಾಡುವುದು.

## ವಿವರಣೆ

ಸೌಮ್ಯೋಕ್ತಿ–ಅಮಂಗಳಕರವಾದ, ಅಶ್ಲೀಲ, ಕರ್ಕಶವೆನಿಸಿದ ವಿಷಯಗಳನ್ನು ನೇರವಾಗಿ ಹೇಳದ ಸೌಮ್ಯವಾಗಿ ಹೇಳುವುದು. ಉದಾ: ಬಳೆ ಒಡೆಯಿತು–ಬಳೆ ಹೆಚ್ಚಾಯಿತು. ಸತ್ತರು– ದೈವಾಧೀನರಾದರು, ಸ್ವರ್ಗಸ್ಥರಾದರು.

**ಪದವಿಂಗಡಣೆ**

| | | | | | | |
|---|---|---|---|---|---|---|
| ನಿಮ್ಮ | + | ಅಕ್ಕನ | + | ಅರಮನೆಗೆ | = | ನಿಮ್ಮಕ್ಕನರಮನೆಗೆ |
| ನನ್ನ | + | ಅಣ್ಣ | | | = | ನನ್ನಣ್ಣ |
| ಉಣಲು | + | ಇಕ್ಕು | | | = | ಉಣಲಿಕ್ಕು |
| ಮೇಲೆ | + | ಒಬ್ಬ | | | = | ಮೇಲೊಬ್ಬ |
| ಒಂದನು | + | ಎತ್ತಿಕೊಂಡು | | | = | ಒಂದನ್ನೆತ್ತಿಕೊಂಡು |

ಈ ರೀತಿಯಲ್ಲಿ ಎಲ್ಲ ಪದಗಳನ್ನು ವಿಂಗಡಿಸಿ ಬರೆಯಲು ಸೂಚಿಸುವುದು.

**ರೂಪಾಂತರಿಸುವುದು**

ಈ ಕಥನಗೀತೆಯು ಸಂಭಾಷಣೆಯ ರೂಪದಲ್ಲಿದೆ. ಒಂದೊಂದು ಪದ್ಯವನ್ನು ಒಬ್ಬೊಬ್ಬರು ಸಂಭಾಷಣೆ ರೂಪದಲ್ಲಿ ಹೇಳಲಿ. ಬಳಿಕ ಪಠ್ಯದಲ್ಲಿ ಮೂರು ಭಾಗಗಳಲಾಗಿ ನೀಡಿರುವ ಗೀತೆಯನ್ನು ವಿದ್ಯಾರ್ಥಿಗಳ ಮೂರು ಗುಂಪುಗಳಿಗೆ ನೀಡುವುದು. ಅವರು ಪರಸ್ಪರ ಚರ್ಚಿಸಿ ಅದರ ಸಾರಾಂಶವನ್ನು ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಎಲ್ಲ ವಿದ್ಯಾರ್ಥಿಗಳೂ ಅದನ್ನು ಗಮನಿಸಿ ತಿದ್ದುಪಡಿ ಬೇಕಿದ್ದರೆ ಹೇಳಲು ಸೂಚಿಸುವುದು. ಅಧ್ಯಾಪಕರು ಅಗತ್ಯವಾದ ಸಲಹೆ ಸೂಚನೆ ಕೊಡುವುದು. ಎಲ್ಲವನ್ನು ಕ್ರೋಡೀಕರಿಸಿ ವಿದ್ಯಾರ್ಥಿಗಳು ಬರೆದುಕೊಳ್ಳಲಿ.

**ವ್ಯಾಕರಣ**

ನಾಮ ಪದಗಳ ವಿವಿಧ ರೂಪಗಳಾದ ರೂಢನಾಮ, ಅಂಕಿತನಾಮ, ಅನ್ವರ್ಥನಾಮಗಳನ್ನು ಪರಿಚಯಿಸುವುದು.

**ರೂಢನಾಮ** : ರೂಢಿಯಿಂದ ಬಂದ ಸಾಮಾನ್ಯ ವಾಚಕಗಳು

ಉದಾ: ನದಿ, ಹೆಂಗಸು

**ಅಂಕಿತನಾಮ** : ಇಟ್ಟುಕೊಂಡ ಹೆಸರುಗಳು,

ಉದಾ: ಕಾವೇರಿ, ಧರ್ಮರಾಜ

ಅನ್ವರ್ಥನಾಮ : ಅರ್ಥಕ್ಕೆ ಅನುಗುಣವಾಗಿ ಇರಿಸಲಾದ ಹೆಸರುಗಳು.

ಉದಾ: ವ್ಯಾಪಾರಿ, ರೋಗಿ

ಇಂತಹ ಪದಗಳನ್ನು ಪಾಠಭಾಗದಿಂದ ಆರಿಸಿ ಬರೆಸುವುದು. ಪಾಠಭಾಗದಲ್ಲಿ ಬಂದಿರುವ ಭಾವನಾಮ ರೂಪಗಳನ್ನು ಗುರುತಿಸಿ ಬರೆಸುವುದು.

**ಚರ್ಚಾಕೂಟ**

ಉತ್ರಾಜಿ ಕಥನ ಗೀತೆಯಲ್ಲಿನ ಕಥಾವಸ್ತುವಿನ ಕುರಿತು ಚರ್ಚಾ ಕೂಟವನ್ನು ನಡೆಸಲು ಹೇಳುವುದು. ಅಧ್ಯಾಪಕರು ಅದರ ತಯಾರಿಯನ್ನು ನಡೆಸಲು ಬೇಕಾದ ಮಾರ್ಗದರ್ಶನವನ್ನು ನೀಡುವುದು. ಚರ್ಚೆಯಲ್ಲಿ ಮೂಡಿ ಬಂದ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಎಲ್ಲಾ ವಿದ್ಯಾರ್ಥಿಗಳು ಪುಸ್ತಕದಲ್ಲಿ ಬರೆದುಕೊಳ್ಳುವುದು.

**ಟಿಪ್ಪಣಿ**

ಉತ್ರಾಜಿ ಮತ್ತು ಅವಳ ಅತ್ತೆಯ ಸಂಭಾಷಣೆಯಲ್ಲಿ ಬಂದಿರುವ ವ್ಯತ್ಯಾಸವನ್ನು ಗುರುತಿಸಿ, ಅಂದಿನ ಸ್ತ್ರೀಯರು ಎಷ್ಟು ಜಾಣೆಯಾಗಿದ್ದರು ಎಂಬುದನ್ನು ಟಿಪ್ಪಣಿ ರೂಪದಲ್ಲಿ ಬರೆಯಿಸುವುದು.

**ಕಿರುಲೇಖನ**

ಉತ್ರಾಜಿಯ ಜೀವನವು ದುರಂತಮಯವಾಗಿ ಕೊನೆಗೊಂಡಿತು. ಇದರ ಕಾರಣವನ್ನು ಕುರಿತಾದ ತಮ್ಮ ಅಭಿಪ್ರಾಯವನ್ನು ಕಿರುಲೇಖನ ರೂಪದಲ್ಲಿ ಬರೆಯಲು ಸೂಚಿಸುವುದು. ಅವರು ಅದನ್ನು ತರಗತಿಯಲ್ಲಿ ಓದಲಿ.

**ಲೇಖನ**

ತವರಿಗೆ ಹೊರಟ ಉತ್ರಾಜಿಯ ಮನಸ್ಸಿನ ದುಃಖದ ಸ್ಥಿತಿಯನ್ನು ಕುರಿತು ವಿದ್ಯಾರ್ಥಿಗಳು ಲೇಖನ ಬರೆಯಲಿ. ತರಗತಿಯಲ್ಲಿ ಮಂಡಿಸಲಿ.

**ವಿಮರ್ಶಾಲೇಖನ**

ಕೌಟುಂಬಿಕ ವ್ಯವಸ್ಥೆಯ ಸೂಕ್ಷ್ಮ ವಿಚಾರಗಳು – ಉತ್ರಾಜಿಯ ಕತೆಯಲ್ಲಿ ಹೇಗೆ ಮೂಡಿ ಬಂದಿವೆ ಎಂಬ ವಿಚಾರವನ್ನು ವಿಮರ್ಶಾತ್ಮಕವಾಗಿ ಬರೆಯಲು ವಿದ್ಯಾರ್ಥಿಗಳಿಗೆ ಹೇಳುವುದು. ತರಗತಿಯಲ್ಲಿ ಅದನ್ನು ಓದಿಸುವುದು. ಅಧ್ಯಾಪಕರು ಸೂಕ್ತ ಮಾರ್ಗದರ್ಶನ ನೀಡುವುದು.

**ಪ್ರಬಂಧ**

ಜನಪದ ಸಾಹಿತ್ಯದಲ್ಲಿ ಹೆಚ್ಚಿನ ಪಾಲು ಹೆಣ್ಣಿನ ಬಗ್ಗೆಯೇ ಹೇಳಿರುವವುಗಳಿವೆ. ಅಂತಹ ಕೆಲವು ಕೃತಿಗಳನ್ನು ಗ್ರಂಥಾಲಯದಿಂದ ಪಡೆದು ಓದಿ, ಜನಪದ ಸಾಹಿತ್ಯದಲ್ಲಿ ಸ್ತ್ರೀ ಎಂಬ ವಿಷಯದ ಕುರಿತು ವಿದ್ಯಾರ್ಥಿಗಳಿಂದ ಪ್ರಬಂಧ ಬರೆಸುವುದು. ಉತ್ತಮ ಪ್ರಬಂಧವನ್ನು ಪತ್ರಿಕೆಯಲ್ಲಿ ಪ್ರಕಟಣೆಗೆ ಕಳುಹಿಸಿಕೊಡುವುದು.

**ಅಭಿಪ್ರಾಯ**

ಕೊನೆಯಲ್ಲಿ ಉತ್ರಾಜಿಯ ತಾಯಿಯು ತನ್ನ ಮಗಳ ಸ್ಥಿತಿಯನ್ನು ಕಂಡು ಮರುಗಿ ಅವಳಿಗೆ ನೀಡುವ ಪ್ರತಿಕ್ರಿಯೆ ಮಹತ್ವವನ್ನು ವಿದ್ಯಾರ್ಥಿಗಳು ಆಲೋಚಿಸಲಿ. ತರಗತಿಯಲ್ಲಿ ತಮ್ಮ ಅಭಿಪ್ರಾಯವನ್ನು ಹೇಳಲಿ. ಉತ್ರಾಜಿ ಗಂಡನ ಕುರಿತಾದ ತಮ್ಮ ಅಭಿಪ್ರಾಯ ತರಗತಿಯಲ್ಲಿ ಮಂಡಿಸಲಿ.

**ಸಾರಾಂಶ**

ಅತ್ತೆಗೂ ಸೊಸೆಗೂ ಮನೆಯ ಹಿಂಭಾಗದಲ್ಲಿ ಜಗಳವಾಯಿತು. ಹೊಲವನ್ನು ಉತ್ತು ಬಂದ ಮಗನಿಗೆ ಊಟ ಬಡಿಸುತ್ತಾ ತಾಯಿಯು'ಉತ್ರಾಜಿ' ಸೊಸೆಯು ನಮಗೆ ಬೇಡ ಅವಳನ್ನು ತವರಿಗೆ ಕಳುಹಿಸಿ ಬಿಡು

ಎಂದಳು.

ಬಿಟ್ಟು ಬಿಡಲು ಅವಳು ಎತ್ತಲ್ಲ, ಎಮ್ಮೆಯಲ್ಲ, ಒಂದು ವರಹ ಕನ್ಯಾಶುಲ್ಕ ಕೊಟ್ಟು ಬಂದವಳು. ಅಂತಹವಳನ್ನು ನಾನು ಹೇಗೆ ಬಿಡಲವ್ವ' ಎಂದು ಮಗನು ಉತ್ತರಿಸಿದನು.

ಒಂದು ವರಹಕ್ಕೆ ನನ್ನ ತೋಳಬಂದಿಯನ್ನು ಮಾರುತ್ತೇನೆ. ಬಳಿಕ ರಾಣಿಯಂತವಳನ್ನು ನಿನಗಾಗಿ ತರುತ್ತೇನೆ. ಇವಳನ್ನು ಮಾತ್ರ ಬಿಟ್ಟು ಬಿಡು' ಎಂದು ತಾಯಿ ನುಡಿದಳು.

'ಬಿಟ್ಟು ಬಿಡಲು ಅವಳು ಆಡು ಅಥವಾ ಕುರಿಯಲ್ಲ. ಮೂರು ವರಹವನ್ನು ತೆರಕೊಟ್ಟು ತಂದವಳನ್ನು ಬಿಡಲು ಸಾಧ್ಯವಿಲ್ಲ' ಎಂದು ಮಗನು ಹೇಳಿದನು.

ಮೂರು ವರಹಕ್ಕೆ ನನ್ನ ಮೂಗುತಿಯನ್ನು ಮಾರುತ್ತೇನೆ. ಬೇರೊಬ್ಬಳು ರಾಣಿಯನ್ನು ತರಿಸುತ್ತೇನೆ. ಮಗನೇ ಅವಳನ್ನು ತವರಿಗೆ ಬಿಟ್ಟು ಬಿಡು' ಎಂದು ತಾಯಿ ಒತ್ತಾಯಿಸುತ್ತಾಳೆ.

"ನೆಲುವಿನ ಮೇಲಿರುವ ಅನ್ನವನ್ನು ಊಟಮಾಡಿ ಹೋಗು, ನೀನಾದರೂ ಊಟಮಾಡು, ನಿನ್ನ ಮಗನಿಗಾದರೂ ಊಟ ಮಾಡಿಸು, ಮುಂದೆ ಬರಲಿರುವವಳಿಗೆ ಸ್ವಲ್ಪ ಇಡು. ಒಲೆಯ ಮೇಲಿರುವ ಹಸುವಿನ ಹಾಲನ್ನು ಕುಡಿದಾದರೂ ಹೋಗು. ನೀನು ಕುಡಿ, ನಿನ್ನ ಮಗನಿಗಾದರೂ ಕುಡಿಸು, ಮುಂದೆ ಬರುವವಳಿಗೆ ಸ್ವಲ್ಪ ಇಡು "– ಎಂದು ಅತ್ತೆ ಸೊಸೆಗೆ ಹೇಳಿದಳು.

ಬಳಿಕ ಸೊಸೆಯು"ಬಾಗಿಲಲ್ಲಿರುವ ಬಾಳೆಯ ಗಿಡಗಳೇ ನಾನು ನನ್ನ ತವರಿಗೆ ಹೋಗುತ್ತೇನೆ" ಎಂದಳು. ಹೋಗುವವಳು ಹೇಗೂ ಹೋಗುತ್ತಿಯಾ, ನೀರು ಹಾಕುವವರು ಯಾರು? ಗಿಡಗಳಲ್ಲಿ ಹಣ್ಣಾದರೆ ಯಾರು ತಿನ್ನುವವರು? ಎಂದು ಅತ್ತೆ ಕೇಳುತ್ತಾಳೆ. "ನೀರು ಹಾಕುವವಳು, ಹಣ್ಣು ತಿನ್ನುವವಳು ನನಗಿಂತ ಜಾಣೆ. ಮನೆಯಲ್ಲಿದ್ದಾಳೆ" ಎನ್ನುತ್ತಾ ಒಂದು ಮಗುವನ್ನು ಎತ್ತಿಕೊಂಡು ಇನ್ನೊಂದು ಮಗುವನ್ನು ಕೈಯಲ್ಲಿ ಹಿಡಿದುಕೊಂಡು, ವಜ್ರದಿಂದ ಮಾಡಿದ ಗೆಜ್ಜೆಕಟ್ಟಿದ ಮಗನನ್ನು ನಡೆಸುತ್ತಾ ಉತ್ರಾಜಿ ತನ್ನ ತವರಿಗೆ ಹೋದಳು.

ದಾರಿಯಲ್ಲಿ ಹಾಸನದ ಗೌಡ ಅವಳನ್ನು ತಡೆದು ನಿಲ್ಲಿಸಿ 'ನೀನು ಯಾವ ರಾಜರ ಸೊಸೆ?' ಎಂದು ಕೇಳಿದನು. 'ನಾನು ಯಾವ ರಾಜನ ಸೊಸೆಯೆಂದು ಹೇಳಲಿ?ಅತ್ತೆ ನನಗೆ ಕಷ್ಟಕೊಟ್ಟು ಕಳಿಸಿದ್ದಾಳೆ. ನನ್ನ ತವರಿಗೆ ಹೋಗುತ್ತೇನೆ' ಎಂದು ಅವಳು ಉತ್ತರಿಸಿದಳು. ಮುಂದೆ ಸಾಗಿ ತವರಿಗೆ ಬಂದಳು. ತಂದೆಯ ಬಳಿಗೆ ಬಂದು'ಅಪ್ಪಾ, ಅಪ್ಪಾಜಿ, ನನ್ನಪ್ಪಾ, ಬಾಗಿಲು ತೆಗೆ' ಎಂದು ಕರೆದಳು. 'ಮಗಳೇ ಚಾಪೆ ಹಾಸಿದೆ, ದೀಪ ಆರಿದೆ, ಕಂದ ತೋಳಿನಲ್ಲಿ ಮಲಗಿದೆ ನಿನ್ನಣ್ಣನ ಅರಮನೆಗೆ ಹೋಗು' ಎಂದು ಉತ್ತರಿಸಿದನು.

ಉತ್ರಾಜಿ ಅಣ್ಣನಲ್ಲಿಗೆ ಬಂದು ಬಾಗಿಲು ತೆರೆಯುವಂತೆ ಕೇಳಿಕೊಂಡಳು. ಅವನು'ಚಾಪೆ, ಹಾಸಿದ, ದೀಪ ಅರಿಸಿದೆ, ಮಲ್ಲಯ್ಯ ತೊಡೆಯಲ್ಲಿ ಮಲಗಿದ್ದಾನೆ, ನೀನು ನಿಮ್ಮಕ್ಕನ ಮನೆಗೆ ಹೋಗು' ಎಂದನು. ಅವಳು ಅಕ್ಕನ ಮನೆಗೆ ಹೋಗಿ ಬಾಗಿಲು ತೆರೆಯುವಂತೆ ಕೇಳಲು ಅಕ್ಕನೂ 'ನೀಲವ್ವ ತೋಳಲ್ಲಿ ಮಲಗಿದ್ದಾಳೆ. ನೀನು ನಿನ್ನ ತಾಯಿ ಮನೆಗೆ ಹೋಗು' ಎಂದಳು. ಉತ್ರಾಜಿಯು ತಾಯಿಯ ಮನೆಗೆ ಬಂದು 'ಅಮ್ಮ ಬಾಗಿಲು ತೆರೆ' ಎಂದು ಅಂಗಲಾಚಿದಳು. ತಾಯಿಯು ಬಾಗಿಲು ತೆರೆದು, ಮಗಳ ತಲೆಯನ್ನುಸವರಿ, ಕಣ್ಣೀರ ಪ್ರವಾಹವನ್ನೇ ಹರಿಸಿದಳು. ಕಣ್ಣೀರು ಸುರಿಸುತ್ತಾ 'ಮಗಳೇ ನಿನ್ನತಂದೆಯೂ ನನ್ನನ್ನ ಹೀಗೆಯೇ ಕಷ್ಟ ಕೊಟ್ಟರು. ನನ್ನ ಗತಿ ನಿನಗೂ ಆಯಿತು. ನೀನು ಉತ್ತರೆ ಮಳೆಯಾಗಿ ಹೊರಡು' ಎಂದು ಸಲಹೆ ಕೊಟ್ಟಳು. ಉತ್ರಾಜಿ ಮಕ್ಕಳನ್ನು ನಡೆಸುತ್ತಾ ಉತ್ತರೆ ಮಳೆಯಾಗಿ ಹೊರಟು ಹೋದಳು.

# ಕಣ್ಣ ಮುಂದೈತೆ ಕೈಲಾಸ

## ಪಾಠ ಪ್ರವೇಶ

ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ತಿಳಿಯಲು ಕೆಲವೊಂದು ಜನಪದ ತ್ರಿಪದಿಗಳನ್ನು ಹಾಡಲು ಹೇಳುವುದು. ವಿದ್ಯಾರ್ಥಿಗಳು ತಾವು ಹಿಂದಿನ ತರಗತಿಗಳಲ್ಲಿ ಓದಿದ ಜನಪದ ತ್ರಿಪದಿಯನ್ನು ನೆನಪಿಸಿಕೊಂಡು ಹಾಡುತ್ತಾರೆ. ಅನಂತರ ಜನಪದ ತ್ರಿಪದಿಗಳ ಅಡಕ ಮುದ್ರಿಕೆ (DVD) ಯನ್ನು ವಿದ್ಯಾರ್ಥಿಗಳಿಗೆ ಕೇಳಿಸುವುದು. ಅವರು ಜನಪದ ಗೀತೆಗಳ ತಾಳ, ಲಯ, ಗೇಯತೆಯನ್ನು ತಿಳಿದುಕೊಳ್ಳುತ್ತಾರೆ. ತರಗತಿಯಲ್ಲಿ ವಿದ್ಯಾರ್ಥಿಗಳು ಜನಪದ ತ್ರಿಪದಿಗಳನ್ನು ರಾಗಬದ್ಧವಾಗಿ ಹಾಡುತ್ತಾರೆ. ಅಗತ್ಯವಿದ್ದ ಕಡೆ ಅಧ್ಯಾಪಕರು ಸೂಕ್ತ ಮಾರ್ಗದರ್ಶನ ನೀಡುವುದು. ವಿದ್ಯಾರ್ಥಿಗಳು ತ್ರಿಪದಿಗಳಲ್ಲಿ ವ್ಯಕ್ತವಾಗುವ ಆಶಯವನ್ನು ತಿಳಿದುಕೊಳ್ಳುತ್ತಾರೆ. ಅಧ್ಯಾಪಕರು ತರಗತಿಯಲ್ಲಿ ವಿವಿಧ ಗುಂಪುಗಳನ್ನಾಗಿ ಮಾಡಿ ಪ್ರತಿಯೊಂದು ಗುಂಪಿಗೂ ಚಟುವಟಿಕೆಗಳನ್ನು ಕೊಡುವುದು. ಪದಗಳ ಅರ್ಥ ಬರೆಯುವುದು. ಪದ ವಿಂಗಡಣೆ, ಆಶಯಗಳನ್ನು ಬರೆಯುವುದು. ಇತ್ಯಾದಿ ಚಟುವಟಿಕೆಗಳನ್ನು ನೀಡುವುದು.

## ಚಟುವಟಿಕೆಗಳು

### ಪದವಿಂಗಡಣೆ

| | | |
|---|---|---|
| ಭಿನ್ನಿಲ್ಲ | = | ಭಿನ್ನ + ಇಲ್ಲ |
| ಭೇದಿಲ್ಲ | = | ಭೇದ + ಇಲ್ಲ |
| ಮುಂದೈತಿ | = | ಮುಂದೆ + ಐತಿ |
| ಬಾಳುವೆಗೆಟ್ಟು | = | ಬಾಳುವೆ + ಕೆಟ್ಟು |
| ಇಷ್ಟುಂಡರೇನು | = | ಇಷ್ಟು + ಉಂಡರೇನು |

### ಪದಗಳ ಅರ್ಥ

| | | |
|---|---|---|
| ಲೆಕ್ಕಣಿಗೆ | = | ಲೇಖನಿ |
| ಕಸಗೊಂಡು | = | ಕಸಿದುಕೊಂಡು |
| ಮುಗಿಲು | = | ಆಕಾಶ |
| ಹಗೆ | = | ಶತ್ರು |
| ಕಿಚ್ಚು | = | ಬೆಂಕಿ |

## ತ್ರಿಪದಿಯ ಲಕ್ಷಣ

- ಮೂರು ಪಾದಗಳಿಂದ ಕೂಡಿರುವುದು.
- ದ್ವಿತೀಯಾಕ್ಷರ ಪ್ರಾಸವನ್ನು ಪಾಲಿಸುವುದು.
- ಅಂಶಗಣಾನ್ವಿತವಾಗಿರುವುದು.

## ಜನಪದ ಹಾಡುಗಳಲ್ಲಿ ವ್ಯಕ್ತವಾಗುವ ಕೌಟುಂಬಿಕ ಬದುಕಿನ ಚಿತ್ರಣ

- ಹೆಣ್ಣು ಸಮಾಜದಲ್ಲಿ ಆದರ್ಶ ಮಾರ್ಗದಲ್ಲಿ ನಡೆಯಬೇಕು. ಮನೆಯ ರೀತಿ ನೀತಿ ಹೊಂದಿಕೊಂಡು ಬಾಳುವುದು ಉತ್ತಮ ಎಂಬ ನಂಬಿಕೆ ಜನಪದರದ್ದಾಗಿದೆ.
- ಸಮಾಜದಲ್ಲಿ ಎಲ್ಲರನ್ನು ಸಮಾನತೆಯ ದೃಷ್ಟಿಯಿಂದ ನೋಡಬೇಕು.
- ಬಡತನ ಎಂಬುದು ಅಸಹನೀಯವಾದುದು.
- ಪರಸ್ಪರ ಸಹಾಯ ಮಾಡುವ ಮನೋಭಾವ.

## ಸಂದರ್ಶನ ನಡೆಸುವುದು

ಸಂದರ್ಶನಕ್ಕಾಗಿ ಜನಪದ ಕಲಾವಿದರನ್ನು ಗುರುತಿಸಿ ನಿರ್ಧರಿಸುವುದನ್ನು ಕಲಾವಿದರಿಗೆ ಕಳುಹಿಸುವ ಪತ್ರ ತಯಾರಿ ಮತ್ತು ದಿನಾಂಕ ನಿಗದಿಪಡಿಸಿಕೊಳ್ಳುವುದು. ಸಂದರ್ಶನಕ್ಕೆ ಬೇಕಾದ ಪ್ರಶ್ನಾವಳಿಗಳ ಕುರಿತು ತರಗತಿಯಲ್ಲಿ ಚರ್ಚಿಸುವುದು. ಪ್ರಶ್ನಾವಳಿಗಳ ಆಧಾರದಿಂದ ಸಂದರ್ಶನ ನಡೆಸಿ ವಿವಿಧ ವಿಷಯಗಳನ್ನು ತಿಳಿದುಕೊಳ್ಳುವುದು.

## ಮಾದರಿ ಪ್ರಶ್ನಾವಳಿ ತಯಾರಿಸುವುದು

- ಪ್ರಶ್ನಾವಳಿಯು ಈ ಕೆಳಗಿನ ಅಂಶಗಳನ್ನು ಒಳಗೊಂಡಿರಬೇಕು.
- ಬಾಲ್ಯ, ವಿದ್ಯಾಭ್ಯಾಸ ಮತ್ತು ಕೌಟುಂಬಿಕ ಪರಿಸರ
- ನಿರ್ದಿಷ್ಟ ಕಲಾರಂಗಕ್ಕೆ ಬರಲು ಪ್ರೇರಣೆ
- ಕಲಾರಂಗದಲ್ಲಿ ಅನುಭವ
- ತಾವು ತೊಡಗಿಸಿಕೊಂಡ ಕಲೆಯ ಬಗ್ಗೆ ಅಭಿಪ್ರಾಯ
- ಕಲಾರಂಗಕ್ಕೆ ಕೊಡುಗೆ
- ಮರೆಯಲಾರದ ಅನುಭವಗಳು
- ದೊರಕಿದ ಪ್ರಶಸ್ತಿಗಳು
- ಕಲೆಯ ಇಂದಿನ ಸ್ಥಿತಿ ಗತಿಗಳು
- ಯುವ ಜನತೆಗೆ ನೀಡುವ ಸಂದೇಶ

ಸಂದರ್ಶನದಿಂದ ದೊರೆತ ಮಾಹಿತಿಯ ಆಧಾರದಿಂದ ಸಂದರ್ಶನ ಲೇಖನವನ್ನು ಬರೆದು ತರಗತಿಯಲ್ಲಿ ಮಂಡಿಸಲಿ.

## ಕಾರ್ಯಯೋಜನೆ ತಯಾರಿ

**ವಿಷಯ:** 'ಜನಪದ ಗೀತೆಗಳ ಸಂಗ್ರಹ ಹಾಗು ವಿಶ್ಲೇಷಣೆ'

ವಿದ್ಯಾರ್ಥಿಗಳು ಗ್ರಂಥಾಲಯದ ಸಹಾಯದಿಂದ ಹಾಗೂ ಇತರ ಮೂಲಗಳಿಂದ ಜನಪದ ಗೀತೆಗಳನ್ನು ಸಂಗ್ರಹಿಸುವುದು. ವಿಶ್ಲೇಷಿಸಿ ಲೇಖನ ಬರೆಯಲಿ.

## ಹಂತಗಳು

- ಮಾಹಿತಿ ಸಂಗ್ರಹ
- ವರ್ಗೀಕರಣ
- ವಿಶ್ಲೇಷಣೆ
- ವರದಿ

## ವರದಿ ತಯಾರಿ

- ಮುನ್ನುಡಿ
- ಪ್ರೋಜೆಕ್ಟ್ ನಡೆಸಿದ ವಿಧಾನ
- ವರ್ಗೀಕರಣ
- ವಿಶ್ಲೇಷಣೆ
- ಉಪಸಂಹಾರ
- ಗ್ರಂಥ ಋಣ
- ಸಹಾಯ ಕೃತಜ್ಞತೆ

## ಕಿರು ಟಿಪ್ಪಣಿ ಬರೆಯುವುದು

"ಬಡವರು ಸತ್ತರೆ... ಬಡವರಿಗೆ ಸಾವ ಕೊಡಬ್ಯಾಡ"–ಇದರ ಕುರಿತು ಟಿಪ್ಪಣಿ ಬರೆಯಲಿ.

- ಕಡು ಬಡತನದ ದಾರುಣ ಚಿತ್ರಣ
- ಬಡವರ ಶೋಷಣೆ
- ರಕ್ಷಣೆಗಾಗಿ ಪರಮಾತ್ಮನಿಗೆ ಮೊರೆ ಹೋಗುವುದು.

ಕಿರು ಟಿಪ್ಪಣಿಯು ಈ ಅಂಶಗಳನ್ನು ಒಳಗೊಂಡಿರಲಿ.

## ಭಾಷಾಭ್ಯಾಸ

ಗ್ರಾಮ್ಯ ರೂಪಗಳನ್ನು ಶಿಷ್ಟ ಭಾಷೆಯ ರೂಪಗಳಲ್ಲಿ ಬರೆಯುವುದು.

| ಗ್ರಾಮ್ಯ ರೂಪ | ಶಿಷ್ಟರೂಪ |
|---|---|
| ಬರತಾಳಂತೆ | ಬರುತ್ತಾಳೆ ಅಂತೆ |
| ಭೇದಿಲ್ಲ | ಭೇದವಿಲ್ಲ |
| ಮಗಳಂಗ | ಮಗಳ ಹಾಗೆ |
| ಸೌದಿಲ್ಲ | ಸೌದೆ ಇಲ್ಲ |
| ಬೈಬ್ಯಾಡ | ಬಯ್ಯ ಬೇಡ |

## ಸಾರಾಂಶ / ಆಶಯ

ಜನಪದರು ಹಲಗೆ ಬಳಪಗಳನ್ನು ಹಿಡಿದು ವಿದ್ಯೆ ಕಲಿತವರಲ್ಲ. ಗುರುಮುಖದಿಂದ ಕೇಳಿ ಅಧ್ಯಯನ ಮಾಡಿದವರಲ್ಲ. ಲೇಖನಿಯ ಹಿಡಿದು ಬರೆದವರಲ್ಲ. ಹೀಗೆ ಜನಪದರು ಅನಕ್ಷರಸ್ಥ ಸಮಾಜದಲ್ಲಿ ಬೆಳೆದು ಬಂದವರಾದರೂ ಅವರಲ್ಲಿ ಜೀವನಾನುಭವಗಳು, ಪ್ರಾಪಂಚಿಕ ಅನುಭವಗಳು ಮಡುಗಟ್ಟಿವೆ.

ಪರರನ್ನು ತನ್ನಂತೆಯೇ ಎಂದು ಬಗೆದರೆ ಅಲ್ಲಿ ಯಾವುದೇ ಭೇದ ಭಾವಕ್ಕೆ ಎಡೆಯಿಲ್ಲ. ಸಮಾಜದಲ್ಲಿ ಪರರನ್ನು ತನ್ನ ಹಾಗೆ, ತನ್ನ ಮಗಳ ಹಾಗೆ ಎಂದು ಸಮಾನತೆಯ ದೃಷ್ಟಿಯಿಂದ ಉಪಚರಿಸಿದಾಗ ಕೈಲಾಸವು ನಮ್ಮ ಕಣ್ಣ ಮುಂದೆಯೇ ಬಂದು ನಿಲ್ಲುತ್ತದೆ. ನಮಗೆ ಸುಖ ಸಂತೋಷಗಳು ದೊರೆಯುತ್ತವೆ.

ಮನೆಗೆ ಸೊಸೆಯ ಬರುವಳೆಂದು ತಿಳಿದಾಗ ಅತ್ತೆಗಾಗುವ ಸಂತೋಷ ಅಷ್ಟಿಷ್ಟಲ್ಲ. ಆದರೆ ಸೊಸೆಯು ಮಗನ ಪ್ರೀತಿಯನ್ನು ಹಂಚಿಕೊಂಡು ಸಾಂಸಾರಿಕ ಬದುಕಿನಲ್ಲಿ ಮುಂದುವರಿಯಲು ತೊಡಗಿದಾಗ ಅತ್ತೆಗೆ ನಿರಾಸೆಯಾಗಿ ಆಕಾಶದತ್ತ ನೋಡುತ್ತಾಳೆ. ಬದುಕಿನಲ್ಲಿ ಅತ್ತೆಯ ಅತಿಯಾದ ನಿರೀಕ್ಷೆ ಹುಸಿಯಾಗುತ್ತದೆ.

ಸಮಾಜದಲ್ಲಿರುವ ಹೆಣ್ಣು ಆದರ್ಶ ಮಾರ್ಗದಲ್ಲಿ ಜೀವಿಸಿದರೆ ಆಕೆಯನ್ನು ಎಲ್ಲರೂ ಆದರಿಸುತ್ತಾರೆ ಹಾಗೂ ಆತ್ಮೀಯತೆಯಿಂದ ಕಾಣುತ್ತಾರೆ. ಆದರೆ ಅವಳು ಬುದ್ಧಿ ಕೆಟ್ಟವಳಾಗಿ ಬದುಕನ್ನು ಹಾಳು ಮಾಡಿದರೆ ಹೆತ್ತವರ ಕುಲದಿಂದಲೂ ದೂರ ಹೋಗಬೇಕಾದ ಅನಿವಾರ್ಯತೆ ಅವಳಿಗೆ ಎದುರಾಗುವುದು. ಮದುವೆಯಾಗಿ ಬಂದ ಹೆಣ್ಣುಮಗಳು ಮನೆಯ ರೀತಿ–ನೀತಿಗಳಿಗೆ ಬದ್ಧಳಾಗಿ ಉತ್ತಮ ಜೀವನವನ್ನು ನಡೆಸಬೇಕು ಎಂಬುದು ಜನಪದರ ಆಸೆ.

ನಮ್ಮಲ್ಲಿ ಸಂಪತ್ತು ಇದ್ದಾಗ ನಾವು ಕೊಬ್ಬಿ ಬಡವರನ್ನು ನಿಂದಿಸಬಾರದು. ಏಕೆಂದರೆ ಸಂಪತ್ತು ನಶ್ವರವಾದುದು. ಮಧ್ಯಾಹ್ನದ ಕಡುಬಿಸಿಲು ಬೇಗನೆ ಮರಳುವಂತೆ ಸಂಪತ್ತು ಕ್ಷಣಿಕವಾದುದು. ಬಡವರು ಸತ್ತರೆ ಅವರ ಹೆಣವನ್ನು ಸುಡಲು ಕೂಡ ಗತಿಯಿಲ್ಲದ ಅವಸ್ಥೆಯಿದೆ. ಹೆಣವನ್ನು ಸಂಸ್ಕರಿಸಲು ಬೇಕಾದ ಸ್ಥಳ, ಕಟ್ಟಿಗೆಗಳಿಲ್ಲದ ದುಸ್ಥಿತಿಯಿದೆ. ಅವರ ಕಷ್ಟದ ತೀವ್ರತೆಯಲ್ಲೇ ಹೆಣ ಕಾಯಬೇಕಾಗಿದೆ. ಆದ್ದರಿಂದ ಬಡವರಿಗೆ ಎಂದೂ ಸಾವನ್ನು ಕರುಣಿಸದಿರು ಎಂಬುದಾಗಿ ಜನಪದರು ಭಗವಂತನಲ್ಲಿ ಬೇಡುತ್ತಾರೆ. ಬಡವರ ಜೀವನದ ಸಂಕಷ್ಟಗಳನ್ನು ತುಂಬ ಪರಿಣಾಮವಾಗಿ ಇಲ್ಲಿ ಚಿತ್ರಿಸಲಾಗಿದೆ.

ದಾನಮಾಡಿದ ನಂತರ ಅದರ ಬಗ್ಗೆ ನೊಂದುಕೊಳ್ಳಬಾರದು ಸಹಾಯ ಪಡೆದವರನ್ನು ಹಂಗಿಸಬಾರದು. ಉಣ ಬಡಿಸಿದಾಗ ತುಂಬಾ ಉಂಡರೆಂದು ಹೇಳಬಾರದು. ಇತರರಿಗೆ ಸಹಾಯ ಮಾಡುವುದು ಮನುಷ್ಯರ ಗುಣ, ಸಹಾಯ ಮಾಡಿದ ಬಳಿಕ ಇತರರಿಗೆ ಕೊಟ್ಟದ್ದು. ಅವರಲ್ಲಿ ತೋರಿಸಿದ ಪ್ರೀತಿಯು ದೇವರ ಕರುಣೆಗೆ ಕಾರಣವಾಗುತ್ತದೆ.

## ಪರಾಮರ್ಶನ ಗ್ರಂಥಗಳು


1. ಜನಪದ ಗೀತಾಂಜಲಿ – ದೇ. ಜವರೇಗೌಡ
2. ಜಾನಪದ ಅಧ್ಯಯನ – ದೇ.ಜ.ಗೌ
3. ಹೊನ್ನ ಬಿತ್ತೇವು ಹೊಲಕೆಲ್ಲ – ಡಾ। ಹಾ.ಮಾ.ನಾಯಕ/ಜಿ.ಶಂ.ಪ
4. ಜಾನಪದ ಸ್ವರೂಪ – ಡಾ.ಹಾ.ಮಾ.ನಾಯಕ


* * *